ಕಾಮಗಾರಿಯ ಗುಣಮಟ್ಟವನ್ನು ಅಳೆಯಲು ಆಯಾಯ ನೋಡಲ್ ಮುಖ್ಯಾಧಿಕಾರಿಗಳು ಮೌಲ್ಯಮಾಪನ ಕೈಗೊಳ್ಳಬೇಕಾಗಿದೆ ಎಂದು ಹೇಳುತ್ತಾರೆ. ಪೇಮಂಟ್ ಎಲ್ಲಿ ಆಗುತ್ತದೆ?

(ಗೊಂದಲ)

ಶ್ರೀ ಜೆ. ಶಿವಣ್ಣ:- ಮಾನ್ಯ ಜಯಚಂದ್ರರವರು ಮುನಿಯಪ್ಪರವರು ಕೇಳಿರತಕ್ಕಂಥದ್ದು, ಮಾನ್ಯ ಕುಮಾರಸ್ವಾಮಿ ಕೇಳಿರತಕ್ಕಂಥದ್ದು ಎಲ್ಲಾ ಒಂದೇ ನಾವು ಕೊಡಬೇಕಾಗಿರುವ ಹಣವನ್ನು ಈಗ ನಾವು ಬಿಡುಗಡೆ ಮಾಡಿದ್ದೇವೆ. ಖರ್ಚಾಗುವಂಥ ಹಣ ಉಳಿದೆದೆ. 3rd party inspection ಮಾಡಬೇಕೆಂದು ಇತ್ತು ಅದನ್ನು ತೆಗೆದುಹಾಕಿ Executive Engineer Level ನಲ್ಲಿ ಮಾಡಬೇಕು ಎಂದು ಇತ್ತು, ಅದನ್ನು ಮಾಡಿದ್ದೇವೆ. ಸುತ್ತೋಲೆ ನಾಲೆ ಹೋಗುತ್ತದೆ. ಅದಕ್ಕೆ ತಾವು ಸ್ಪಂದಿಸಬೇಕು.

(ಗೊಂದಲ)

ಶ್ರೀ ಟಿ.ಬಿ.ಜಯಚಂದ್ರ:- PACನಲ್ಲಿ ತಮ್ಮ ಎದುರಿಗೆ ಮೂರು ಬಾರಿ ಚರ್ಚೆಯಾಗಿದೆ, ಮತ್ತೆ ಅದೇ ಉತ್ತರವನ್ನು ಕೊಡುತ್ತಿದ್ದಾರೆ. ನಾವು ಏನು ಮಾಡಬೇಕು ಹೇಳಿ?

ಅಧ್ಯಕ್ಷರು:- Guidelines ಎಲ್ಲಾ change ಮಾಡಿ ಆಗಿದೆ. ಅದರ ಪ್ರಕಾರ direction ಕೊಡಿ.

ಶ್ರೀ ಎಸ್.ಶಿವಣ್ಣ:- ಅಧ್ಯಕ್ಷರೇ guidelines change ಮಾಡಿಯೇ ನಾವು ಮಾಡಿರುವುದು. ಅದನ್ನು ನಾನು ಚುಟುಕಾಗಿ ಹೇಳಿದೆ ಅಷ್ಟೆ.

ಅಧ್ಯಕ್ಷರು:- ಸ್ಪಷ್ಟವಾಗಿ ನಿಮ್ಮ ಅಧಿಕಾರಿಗಳಿಗೆ ಹೇಳಿ.

ಶ್ರೀ ಎಸ್.ಶಿವಣ್ಣ:- ಆಯಿತು.

ಅಧ್ಯಕ್ಷರು:- ಮಾನ್ಯ ಕರುಣಾಕರರೆಡ್ಡಿಯವರು ಮಾತನಾಡಿ.

4. ವಿಷಯ: ಕೇಂದ್ರ ಸರ್ಕಾರ ರಾಜ್ಯದ ಬೀದರ್, ಗುಲ್ಬರ್ಗಾ, ಯಾದಗಿರಿ, ರಾಯಚೂರು, ಕೊಪ್ಪಳ ಮತ್ತು ಬಳ್ಳಾರಿ ಈ 6 ಜಿಲ್ಲೆಗಳಿಗೆ ಪ್ರಾದೇಶಿಕ ಮೀಸಲು ಮತ್ತು ಅಭಿವೃದ್ಧಿಗೆ ವಿಶೇಷ ಒತ್ತು ನೀಡಲು ಸಂವಿಧಾನದ 371 ಕಲಂ ಅಡಿ ತಿದ್ದುಪಡಿ ತಂದಿರುವ ಬಗ್ಗೆ.

ಶ್ರೀ ಜಿ. ಕರುಣಾಕರರೆಡ್ಡಿ (ಹರಪನಹಳ್ಳಿ):- ಮಾನ್ಯ ಅಧ್ಯಕ್ಷರೆ, ಇತ್ತೀಚೆಗೆ ಮಾನ್ಯ ಕೇಂದ್ರ ಸರ್ಕಾರದವರು ರಾಜ್ಯದ 6 ಜಿಲ್ಲೆಗಳಾದ ಬೀದರ್, ಗುಲ್ಬರ್ಗ, ಯಾದಗಿರಿ, ರಾಯಚೂರು, ಕೊಪ್ಪಳ, ಬಳ್ಳಾರಿ ಜಿಲ್ಲೆಗಳಿಗೆ ಪ್ರಾದೇಶಿಕ ಮೀಸಲು ಮತ್ತು ಅಭಿವೃದ್ಧಿಗೆ ವಿಶೇಷ ಒತ್ತು ನೀಡಲು ಸಂವಿಧಾನದ 371 ಕಲಂ ಅಡಿ ತಿದ್ದುಪಡಿ ತಂದಿರುವುದು ತಮ್ಮಗೆಲ್ಲಾ ಗೊತ್ತಿರುವ ವಿಚಾರ. ಆದರೆ ಇದರಲ್ಲಿ ಹರಪನಹಳ್ಳಿ ತಾಲ್ಲೂಕನ್ನು ಬಿಟ್ಟಿದ್ದಾರೆ. ಈ ಹಿಂದೆ ಹರಪನಹಳ್ಳಿ ತಾಲ್ಲೂಕು ಬಳ್ಳಾರಿ ಜಿಲ್ಲೆಯಲ್ಲಿದ್ದು, 1997-98 ರಲ್ಲಿ ಹೊಸ ಜಿಲ್ಲೆಗಳು ರಚನೆಯಾದಾಗ ದಾವಣಗೆರೆ ಜಿಲ್ಲೆಗೆ ಸೇರಿಕೊಂಡಿದೆ. ಇವತ್ತಿಗೂ ಹೈದರಾಬಾದ್-ಕರ್ನಾಟಕ ಪ್ರಾದೇಶಿಕ ಅಭಿವೃದ್ಧಿಯ ಹಣ ಹಿಂದುಳಿದ ತಾಲ್ಲೂಕು ಅಭಿವೃದ್ಧಿಗೂ ಇವತ್ತೂ ಹರಪನಹಳ್ಳಿ ತಾಲ್ಲೂಕಿಗೆ ಹಣ ಬರುತ್ತಿದೆ. ಡಾ.ನಂಜುಂಡಪ್ಪ ವರದಿ ಪ್ರಕಾರ ಅತೀ ಹಿಂದುಳಿದ ತಾಲ್ಲೂಕು ಆಗಿದ್ದು, ಈಶಾನ್ಯ ಪದವೀಧರ ಕ್ಷೇತ್ರ ವ್ಯಾಪ್ತಿಯಲ್ಲಿ ಹರಪನಹಳ್ಳಿಯಲ್ಲಿ ಇವತ್ತಿಗೂ ಓಟಿಂಗ್ ಆಗುತ್ತಿದೆ. ಬಳ್ಳಾರಿ ಜಿಲ್ಲೆಯ ಎಂ.ಎಲ್.ಸಿ. ಚುನಾವಣೆಗೂ ಹರಪನಹಳ್ಳಿ ತಾಲ್ಲೂಕಿನಲ್ಲಿ ಓಟಿಂಗ್ ಆಗುತ್ತಿದೆ. ಆದ್ದರಿಂದ ಇವತ್ತು ನನ್ನ ಹರಪನಹಳ್ಳಿ ಕ್ಷೇತ್ರದ ನಾಗರಿಕರ ಪರವಾಗಿ ಮತ್ತು ವಿದ್ಯಾರ್ಥಿಗಳ ಪರವಾಗಿ ಏನು ಹರಪನಹಳ್ಳಿಗೆ ಅನ್ಯಾಯವಾಗಿದೆ, ಅದನ್ನು ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರ ಗಮನಕ್ಕೆ ತೆಗೆದುಕೊಂಡು ಹರಪನಹಳ್ಳಿಯನ್ನು ಕೂಡ ಈ ಆರು ಜಿಲ್ಲೆಗಳ ಜೊತೆಗೆ 371 ಸಂವಿಧಾನ ತಿದ್ದುಪಡಿ ಕಲಂ ಏನು ತಿದ್ದುಪಡಿ ಆಗಿದೆ ಅದರ ವ್ಯಾಪ್ತಿಗೆ ಸೇರಿಸಿ ನ್ಯಾಯ ಒದಗಿಸಿಕೊಡಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):- ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಮಾನ್ಯ ಜಿ.ಕರಣಾಕರರೆಡ್ಡಿಯವರು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ ವಿಷಯಕ್ಕೆ ಉತ್ತರವನ್ನು ಹೇಳುವುದಕ್ಕೆ ಬಯಸುತ್ತಿದ್ದೇನೆ. ಹೈದರಾಬಾದ್-ಕರ್ನಾಟಕ ಪ್ರದೇಶದವರಿಗೆ ಸರ್ಕಾರಿ ಹುದ್ದೆಗಳಲ್ಲಿ ನೇಮಕಾತಿ ಹಾಗೂ ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶಕ್ಕೆ ಮೀಸಲಾತಿಯನ್ನು ನಿಗದಿಪಡಿಸುವ ಸಂಬಂಧ ಭಾರತ ಸಂವಿಧಾನಕ್ಕೆ 118ನೇ ತಿದ್ದುಪಡಿಯನ್ನು ಮಾಡಿ ಅನುಚ್ಛೇದ 371(J) ಸೇರ್ಪಡಿಸಲಾಗಿರುತ್ತದೆ. ಕೇಂದ್ರ ಸರ್ಕಾರವು ನಿಗದಿಪಡಿಸಿರುವ ದಿನಾಂಕದಂದು ತಿದ್ದುಪಡಿ ಜಾರಿಗೆ

ಬರಲಿದೆ ಎಂದು ಭಾರತದ ಸಂವಿಧಾನ 118ನೇ ತಿದ್ದುಪಡಿ ವಿಧೇಯಕ 2012 ರಲ್ಲಿ ಉಪಬಂಧವನ್ನು ಕಲ್ಪಿಸಲಾಗಿದ್ದು, ಕೇಂದ್ರ ಸರ್ಕಾರವು ಈ ಕುರಿತು ಅಧಿಸೂಚನೆಯನ್ನು ಹೊರಡಿಸಬೇಕಾಗಿರುತ್ತದೆ. ರಾಜ್ಯ ಸರ್ಕಾರದ ನಿರ್ಣಯದಂತೆ ಬೀದರ್, ಗುಲ್ಬರ್ಗ, ಯಾದಗಿರಿ, ರಾಯಚೂರು, ಕೊಪ್ಪಳ ಮತ್ತು ಬಳ್ಳಾರಿ ಜಿಲ್ಲೆಗಳ ಹೈದರಾಬಾದ್ ಕರ್ನಾಟಕ ಪ್ರದೇಶ ಒಳಗೊಂಡಿರುವ ಜಿಲ್ಲೆಗಳಂತೆ ಗುರುತಿಸಲಾಗಿದೆ. ಪ್ರಸ್ತುತ ಹರಪನಹಳ್ಳಿ ತಾಲ್ಲೂಕು ದಾವಣಗೆರೆ ಜಿಲ್ಲೆಗೆ ಸೇರಿರುತ್ತದೆ. ಆದ್ದರಿಂದ ದಾವಣಗೆರೆ ಜಿಲ್ಲೆಯಲ್ಲಿರುವ ಹರಪನಹಳ್ಳಿ ತಾಲ್ಲೂಕನ್ನು 371 (J) ತಿದ್ದುಪಡಿ ಸೌಲಭ್ಯಗಳಿಗೆ ಸೇರ್ಪಡಿಸಲಾಗಿರುವುದಿಲ್ಲ. ಮಾನ್ಯ ಅಧ್ಯಕ್ಷರೆ, ಮಾನ್ಯ ಕರುಣಾಕರರೆಡ್ಡಿಯವರು ಹೇಳಿದಂತೆ ಮೊದಲು ಇದು ಬಳ್ಳಾರಿ ಜಿಲ್ಲೆಯಲ್ಲಿ ಇತ್ತು. ವಿಧಾನ ಪರಿಷತ್ತು ಕ್ಷೇತ್ರಕ್ಕೆ ಹರಪನಹಳ್ಳಿ ಈಗಲೂ ಬಳ್ಳಾರಿ ಮತ್ತು ಗುಲ್ಬರ್ಗದ ಭಾಗಕ್ಕೆ ಸೇರಿಕೊಂಡಿದೆ. ಅದು ತಾಂತ್ರಿಕವಾಗಿ ಜಿಲ್ಲೆ ಬೇರ್ಪಟ್ಟ ನಂತರದಲ್ಲಿ ಹರಪ್ಪನಹಳ್ಳಿ ದಾವಣಗೆರೆ ಜಿಲ್ಲೆಯಲ್ಲಿ ಸೇರಿದೆ. ಹಾಗಾಗಿ ತಾಂತ್ರಿಕವಾಗಿ ಬರುವುದಿಲ್ಲವೆಂಬುವುದು ಸ್ಪಷ್ಟವಾಗಿದೆ. ವಿಜಾಪುರದ ಭಾಗದವರು ಈ ರೀತಿಯ ಪ್ರಸ್ತಾವನೆಯನ್ನು ಕೇಳುತ್ತಿದ್ದಾರೆ. ಈ ವಿಷಯ ಮುಖ್ಯಮಂತ್ರಿಗಳ ಗಮನದಲ್ಲಿ ಇದೆ. ಈಗಾಗಲೇ ಮಾತನಾಡಿದ್ದು ಮುಖ್ಯಮಂತ್ರಿಗಳ ಜೊತೆ ಮತ್ತೆ ಈ ವಿಷಯವಾಗಿ ಮಾತನಾಡುತ್ತೇನೆ.

ಅಧ್ಯಕ್ಷರು:– ಶಿಫಾರಸ್ಸು ಮಾಡಿ. ವೆಂಕಟರಾವ್ ನಾಡಗೌಡರವರು ಮಾತನಾಡಿ.

ಶ್ರೀ ವೆಂಕಟರಾವ್ ನಾಡಗೌಡ(ಸಿಂಧನೂರು):– ಅಧ್ಯಕ್ಷರೆ ಎಲ್ಲರಿಗೂ ಗೊತ್ತಿರುವ ಹಾಗೆ ಹೈದರಾಬಾದ್ ಕರ್ನಾಟಕಕ್ಕೆ ವಿಶೇಷವಾದ ಸ್ಥಾನಮಾನ ಕೊಡುವ ಬಗ್ಗೆ ಸಂವಿಧಾನದ ಕಲಂ 371 (J) ತಿದ್ದುಪಡಿಯಾಗಿದೆ. ರಾಜ್ಯ ಸರ್ಕಾರ ಈಗ ನಿಯಮಾವಳಿಗಳನ್ನು ರಚಿಸಬೇಕಾಗಿದೆ. ಈ ಹಂತದಲ್ಲಿ ಈಗ ಶಿಕ್ಷಣ ಇಲಾಖೆಯಿಂದ ಶಿಕ್ಷಕರ ನೇಮಕಾತಿ ಪ್ರಕ್ರಿಯೆ ಪ್ರಾರಂಭ ಮಾಡಿದ್ದಾರೆ. ನಮ್ಮ ಹೈದರಾಬಾದ್ ಕರ್ನಾಟಕ ಭಾಗದಲ್ಲಿ ಸುಮಾರು 1,300ಕ್ಕೂ ಹೆಚ್ಚು ಶಿಕ್ಷಕರನ್ನು ತುಂಬುವುದಕ್ಕೆ ತಾವು ಕ್ರಮ ತೆಗೆದುಕೊಳ್ಳುತ್ತಿದ್ದೀರಿ. ಈಗ ಏನಾದರೂ ಅವರನ್ನು ತುಂಬಿ ಬಿಟ್ಟರೆ ನಮ್ಮ ಭಾಗದ ಯುವಕರಿಗೆ ತೊಂದರೆಯಾಗುತ್ತದೆ. ತಾತ್ಕಾಲಿಕವಾಗಿ ಅದನ್ನು ತಡೆಹಿಡಿದು ಈ ನಿಯಮಾವಳಿಗಳನ್ನು ರಚನೆ ಮಾಡಿ

ತದನಂತರ ಆ ಸ್ಥಾನಗಳನ್ನು ತುಂಬುವುದಕ್ಕೆ ಕ್ರಮ ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್:– ಇದು ಕೇವಲ Teacher's appointment ಅಲ್ಲ. ಎಲ್ಲಾ appointments ತಡೆಹಿಡಿಯಬೇಕೆಂದು ಮುಖ್ಯಮಂತ್ರಿಗಳಿಗೆ ಮನವಿ ಮಾಡಲಾಗಿದ್ದು, ಮುಖ್ಯಮಂತ್ರಿಗಳು ಹೇಳಿಕೆಯನ್ನು ಕೊಟ್ಟಿದ್ದಾರೆ. ಆ ಹಿನ್ನಲೆಯಲ್ಲಿ ಕಲಂ 371 (J) ಜಾರಿಗೆ ಬರುವತನಕ ಎಲ್ಲಾ ನೇಮಕಾತಿಗಳನ್ನು ತಡೆಹಿಡಿಯಬೇಕೆಂದು ನಮ್ಮ ಮನವಿ.

ಶ್ರೀ ಸಂಗಣ್ಣ ಅಮರಪ್ಪ ಕರಡಿ:– ನಾಲ್ಕು ಸಾವಿರ ಶಿಕ್ಷಕರನ್ನು ತುಂಬಬೇಕು ಎಂದು ಇದೆ. ರಾಜ್ಯ ಸರ್ಕಾರದ ಅಧಿಸೂಚನೆ ಕಾರ್ಯರೂಪಕ್ಕೆ ಬಂದರೆ ನಮ್ಮ ಮಕ್ಕಳಿಗೆ ಅನ್ಯಾಯ ಆಗುತ್ತದೆ. ಆ ಕಾರಣಕ್ಕಾಗಿ ಅಧಿಸೂಚನೆಯನ್ನು ವಾಪಸ್ಸು ತೆಗೆದುಕೊಳ್ಳುತ್ತೇವೆ, ನೇಮಕಾತಿ ಪ್ರಕ್ರಿಯೆಯನ್ನು ತಡೆ ಹಿಡಿಯುತ್ತೇವೆ ಎನ್ನುವ ಸ್ಪಷ್ಟವಾದ ಉತ್ತರ ಬೇಕು.

ಶ್ರೀ ಬಂಡೆಪ್ಪ ಖಾಶೆಂಪೂರ್:– ಸನ್ಮಾನ್ಯ ಅಧ್ಯಕ್ಷರೆ, ಇದ್ದು general ಆಗಿದೆ. ಇವತ್ತು ಆ ಭಾಗದಲ್ಲಿ ಶಿಕ್ಷಕರ ಹುದ್ದೆ ಅಂತ ಅಲ್ಲ ಯಾವುದೇ ಸಮಸ್ತ ಸರ್ಕಾರಿ ಹುದ್ದೆಗಳನ್ನು ಭರ್ತಿಮಾಡಿಕೊಳ್ಳುವುದು ಸ್ಥಗಿತವಾಗಬೇಕು. ಕೇಂದ್ರ ಸರ್ಕಾರ ಕಲಂ 371 ಮಾಡಿದ್ದಾರೆ. ಆ ಭಾಗದ ಜನರಿಗೆ ಇವತ್ತು ನ್ಯಾಯ ಕೊಡಬೇಕಾಗಿದೆ. ಇವತ್ತು ಇವರು ತುಂಬಿದರೆ ಆ ಭಾಗದ ಜನರಿಗೆ loss ಆಗುತ್ತದೆ. complete process ಮುಗಿಯುವರೆಗೆ ತಾವು ಶಿಕ್ಷಕರ ಹುದ್ದೆ ಮಾತ್ರವಲ್ಲ ಸರ್ಕಾರದ ಪರವಾಗಿ ಸಮಸ್ತ ಹುದ್ದೆಗಳನ್ನು ತುಂಬಬಾರದು. Reservation ಆ ಭಾಗಕ್ಕೆ ಜಾಸ್ತಿ ಕೊಡಬೇಕು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಮಾನ್ಯ ಅಧ್ಯಕ್ಷರೆ, ಈಗಾಗಲೇ ಶ್ರೀಯುತ ಕರುಣಾಕರರೆಡ್ಡಿಯವರು ವಿಷಯ ಪ್ರಸ್ತಾಪಿಸಿದಾಗ ಹೇಳಿದಂತೆ ನಮ್ಮ 118ನೇ ತಿದ್ದುಪಡಿ ಏನಾಗಿದೆ 371(J)ಅನ್ನು ನಾವು ಅಳವಡಿಸಿಕೊಳ್ಳಬೇಕು ಎನ್ನುವಂಥದ್ದು, ಇದು ನಮ್ಮ ರಾಜ್ಯದ ಮತ್ತು ವಿಶೇಷವಾಗಿ ಹೈದರಾಬಾದ್–ಕರ್ನಾಟಕದ ಅಭಿವೃದ್ಧಿ ದೃಷ್ಟಿಯಿಂದ ಬಹಳ ಒಳ್ಳೆಯ ಒಂದು ನಿರ್ಣಯವಾಗಿದೆ. ಇದನ್ನು ನಾವು ಸ್ವಾಗತಿಸಲೇಬೇಕು. ನನ್ನ ಇಲಾಖೆಯಲ್ಲಿ ಶಿಕ್ಷಕರ ಹುದ್ದೆಗಳು ಖಾಲಿಯಿರುವುದು ತಮ್ಮೆಲ್ಲರ ಗಮನದಲ್ಲಿದೆ. ಸರ್ಕಾರದಲ್ಲಿ 4000 ಶಿಕ್ಷಕರ ಹುದ್ದೆಗಳನ್ನು ತುಂಬುವಂಥ ಪ್ರಕ್ರಿಯೆಯನ್ನು ನಾವು ಪ್ರಾರಂಭ

ಮಾಡಿದ್ದೇವೆ. ಈಗ ಸಂವಿಧಾನದ ತಿದ್ದುಪಡಿಯಾಗಿರುವುದು, ಅದು ಕಾನೂನಾಗಿ ನಂತರ ನಿಯಮಾವಳಿಗಳಾಗಿ ರಾಜ್ಯ ಸರ್ಕಾರ ಜಾರಿಗೆ ತರುವುದಕ್ಕೆ ಅದರದ್ದೇ ಆದ ಸಮಯ ತೆಗೆದುಕೊಳ್ಳಬಹುದು ಎನ್ನುವಂಥ ಒಂದು ಪ್ರಶ್ನೆ ಇದ್ದೇ ಇದೆ. ಅದುವರೆಗೂ ಶಿಕ್ಷಕರಂಥ ಹುದ್ದೆಗಳನ್ನು ಖಾಲಿಯಿಡುವುದು ಸೂಕ್ತ ಆಗುವುದಿಲ್ಲ.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್:– ಮಾನ್ಯ ಸಚಿವರೇ, ಎಲ್ಲಾ ಆಗಿದೆ. ರೂಲ್ಸ್ ಹೊರಡಿಸಬೇಕು ಅಷ್ಟೇ. It is a matter of one day.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಹಾಗಾಗಿ ಶಿಕ್ಷಕರ ಹುದ್ದೆಗಳನ್ನು ಖಾಲಿ ಇಡುವುದು ಸೂಕ್ತವಾಗುವುದಿಲ್ಲವೆಂದು ರಾಜ್ಯದಲ್ಲಿ 4000 ಹುದ್ದೆಗಳನ್ನು ತುಂಬುವುದಕ್ಕೆ ನಾವು ಈಗಾಗಲೇ ಅಧಿಸೂಚನೆಯನ್ನು ಹೊರಡಿಸಿದ್ದೇವೆ. ಆದಾಗ್ಯೂ ಈಗ ಒಮ್ಮೆ ಈ ಹುದ್ದೆಗಳನ್ನು ತುಂಬಿಕೊಂಡರೆ, ಆ ಭಾಗದವರಿಗೆ ಅವಕಾಶ ಸಿಗುವುದಿಲ್ಲವೆಂದು ಮಾನ್ಯ ಸದಸ್ಯರುಗಳ ಭಾವನೆಯಿದೆ. ಅದಕ್ಕಾಗಿ ನಾವು ನಮ್ಮ Actನಲ್ಲಿ ಏನು ಮಾಡಿದ್ದೇವೆಂದರೆ, ನಿಮಗೆಲ್ಲಾ ಗೊತ್ತಿದೆ, ಆ ಭಾಗದಲ್ಲಿ ಅಲ್ಲಿಂದ ಈಗ ಯಾರಿಗೂ transfer ಕೊಡುತ್ತಿಲ್ಲ. ನಿಮಗೆ ಗೊತ್ತಿದೆ 1% ಮಾತ್ರ ಅಷ್ಟೇ inter-division transferಗಳಿರುವುದು. ಈಗ ಅಲ್ಲಿ ಯಾರು ಉದ್ಯೋಗ ಪಡೆದುಕೊಳ್ಳುತ್ತಾರೋ, ಅವರು ಅಲ್ಲಿಯವರೇ ಆಗಿರಬೇಕು ಎನ್ನುವ ರೀತಿಯಲ್ಲಿ ಈಗ ಆಗಿದೆ. ಆದರೂ ಸಹ 371(J) ಬಂದಿರುವುದರಿಂದ ಅಲ್ಲಿಯವರಿಗೇ ಆದ್ಯತೆ ಸಿಗಬೇಕು, ಅಲ್ಲಿಯವರಿಗೇ ಆದ್ಯತೆ ಸಿಗುತ್ತದೆ. ಈಗ ಅದುವರೆಗಿನ ಮಧ್ಯದ ಅವಧಿಯಲ್ಲಿ ಈ ರೀತಿ ಯಾವುದೇ ಇಲಾಖೆಯಲ್ಲಿ call for ಮಾಡಬಾರದು, ಹುದ್ದೆಗಳನ್ನು ತುಂಬಿಕೊಳ್ಳಬಾರದೆಂದು ಆ ಭಾಗದ ಸದಸ್ಯರ ಸಹಜವಾದ ಭಾವನೆಗಳಿವೆ. ಹಾಗಾಗಿ ಈ ಭಾವನೆಗಳನ್ನು ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ಮಾತನಾಡಿ ಮುಂದಿನ ಅಗತ್ಯ ಕ್ರಮಗಳ ಬಗ್ಗೆ ನಾವು ಚರ್ಚಿಸುತ್ತೇವೆ.

ಶ್ರೀ ಬಂಡೆಪ್ಪ ಖಾಶೆಂಪೂರ್:– Stop ಮಾಡಿ. ಈಗ ಅದನ್ನು stop ಮಾಡುತ್ತೇನೆ, ಮುಂದಿನ process ಮಾಡುತ್ತೇನೆ ಎಂದು ಹೇಳಿ. ಅಧ್ಯಕ್ಷರೆ, ಇದು ತಪ್ಪಾಗುತ್ತದೆ.

ಸಭಾಧ್ಯಕ್ಷರು:– ಇದು ಶೂನ್ಯ ವೇಳೆ.

(ಗೊಂದಲ)

ಶ್ರೀ ಬಂಡೆಪ್ಪ ಖಾಶೆಂಪೂರ್:– No, ಶೂನ್ಯ ವೇಳೆಯಾದರೇನು? ಅದು ತಪ್ಪಾಗುತ್ತದೆ. ಏನು records ಇದೆ ಅದನ್ನು stop ಮಾಡಿ. ಬನ್ನಿ ಸದನದ ಬಾವಿಯೊಳಗೆ ಹೋಗೋಣ. ಅಲ್ಲಿ ಜನ ಬೀದಿಗೆ ಇಳಿದು ಹೋರಾಟ ಮಾಡುತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು:– ಹೇಳಿದ್ದಾರಲ್ಲ?

ಶ್ರೀ ಬಂಡೆಪ್ಪ ಖಾಶೆಂಪೂರ್:– ಅಲ್ಲ, ಹೇಳಿ, stop ಮಾಡುತ್ತೇನೆ ಎಂದು ಹೇಳಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಮುಖ್ಯಮಂತ್ರಿಗಳು ಬರಲಿ. ಮುಖ್ಯಮಂತ್ರಿಗಳೊಂದಿಗೆ ಚರ್ಚೆ ಮಾಡುತ್ತೇನೆ. ಈಗ ಮುಖ್ಯಮಂತ್ರಿಗಳು ಇಲ್ಲ.

ಶ್ರೀ ಬಂಡೆಪ್ಪ ಖಾಶೆಂಪೂರ್:– ಇಲ್ಲ. ಇದು ಬಹಳ ಅನ್ಯಾಯವಾಗುತ್ತದೆ. ಅಧ್ಯಕ್ಷರೆ ಇದು ಬಹಳ serious subject ಇದೆ.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್:– ಒಂದು ದಿನದಲ್ಲಿ ನಿಯಮಾವಳಿ ಮಾಡಬಹುದು.

ಶ್ರೀ ಬಂಡೆಪ್ಪ ಖಾಶೆಂಪೂರ್:– ಬನ್ನಿ Stop ಮಾಡಬೇಕು. Stop ಮಾಡುತ್ತೇನೆ ಎಂದು ಹೇಳಲ್ಲಿ ಅಧ್ಯಕ್ಷರೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ನಾನು ಈಗಾಗಲೇ ಸ್ಪಷ್ಟಪಡಿಸಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ಚರ್ಚಿಸಿಕೊಂಡು ಮುಂದಿನ ಪ್ರಕ್ರಿಯೆಗಳ ಬಗ್ಗೆ ನಾವು ನಿರ್ಣಯ ತೆಗೆದುಕೊಳ್ಳುತ್ತೇವೆ. ಇದು ಕೇವಲ ನನ್ನ ಇಲಾಖೆಗೆ ಮಾತ್ರ ಅನ್ವಯಿಸುವಂತಹ ವಿಷಯ ಅಲ್ಲ. ಇದು ಎಲ್ಲಾ ಇಲಾಖೆಗಳಿಗೆ ಸರ್ಕಾರದ ವ್ಯಾಪ್ತಿಗೆ ಬರುವಂತಹ ವಿಷಯ. ಹಾಗಾಗಿ ಮುಖ್ಯಮಂತ್ರಿಗಳ ಜೊತೆಯಲ್ಲಿ ಚರ್ಚಿಸಿಕೊಂಡು ಮುಂದಿನ ನಿರ್ಣಯವನ್ನು ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು:– ಹೇಳಿದ್ದಾರೆ.

ಶ್ರೀ ಬಂಡೆಪ್ಪ ಖಾಶೆಂಪೂರ್:– ಅಲ್ಲಿ ಜನ ಬೀದಿಯಲ್ಲಿ ನಿಂತು ಹೋರಾಟ ಮಾಡುತ್ತಿದ್ದಾರೆ. ಅವರು ತೀರ್ಮಾನ ತೆಗೆದುಕೊಳ್ಳುವವರೆಗೆ ನಿಲ್ಲಿಸುತ್ತೇವೆ ಎಂದು ಹೇಳಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ನಿಮಗೆ ಅರ್ಜಿ ಕೊಡುವುದಕ್ಕೆ ಇನ್ನೂ 1 ತಿಂಗಳಿದೆ.

(ಗೊಂದಲ)

ಶ್ರೀ ಬಂಡೆಪ್ಪ ಖಾಶೆಂಪೂರ್:– ಒಪ್ಪುತ್ತೇನೆ. ಆದರೆ ಅಲ್ಲಿ strike ನಡೆಯುತ್ತಿದೆ.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್:– ಹೇಳಿಕೆ ಕೊಡಲಿ, ಸೋಮವಾರ ಕೊಡಲಿ ಸೋಮವಾರ ಮುಖ್ಯಮಂತ್ರಿಗಳು ಈ ಸದನಕ್ಕೆ ಉತ್ತರ ಕೊಡಲಿ.

ಅಧ್ಯಕ್ಷರು:– ಸೋಮವಾರ ಮತ್ತೆ ಪ್ರಸ್ತಾಪ ಮಾಡಿ.

ಶ್ರೀ ಬಂಡೆಪ್ಪ ಖಾಶೆಂಪೂರ್:– ಸೋಮವಾರ ಉತ್ತರ ಕೊಡಲಿ.

ಅಧ್ಯಕ್ಷರು:– ಸೋಮವಾರ ಪ್ರಸ್ತಾಪ ಮಾಡಿ.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್:– ಸೋಮವಾರ ಮುಖ್ಯಮಂತ್ರಿಗಳು ಇದ್ದಾಗ ಶೂನ್ಯ ವೇಳೆಯಲ್ಲಿ ಮತ್ತೊಂದು ಅವಕಾಶ ಕೊಡಿ.

ಅಧ್ಯಕ್ಷರು:– ಸೋಮವಾರ ಪ್ರಸ್ತಾಪ ಮಾಡಿ.

(ಗೊಂದಲ)

ಅಧ್ಯಕ್ಷರು:– ಸೋಮವಾರ ಪ್ರಸ್ತಾಪ ಮಾಡಿ ಎಂದರೂ ಕೇಳುವುದಿಲ್ಲವೆಂದರೆ ಹೇಗೆ?

ಶ್ರೀ ಬಂಡೆಪ್ಪ ಖಾಶೆಂಪೂರ್:– ಅರ್ಧ ಗಂಟೆಗೆ ಹಾಕಿ ಬಿಡಿ, ಅಧ್ಯಕ್ಷರೆ.

ಅಧ್ಯಕ್ಷರು:– ಎಲ್ಲಾ ಅರ್ಧ ಗಂಟೆನೇ ಮಾಡಿಕೊಂಡಿದ್ದರೆ ಅದೇ ಆಗುತ್ತದೆ. ಇದೇನು ಅರ್ಧ ಗಂಟೆ ವಿಷಯಕ್ಕೆ ಬರುತ್ತದೆಯೇ? ಎಲ್ಲಾ ಕೇಳುವುದು ಎಂದರೆ ಹೇಗೆ?

5. ವಿಷಯ:– ಭಟ್ಕಳ ತಾಲ್ಲೂಕಿಗೆ ಆರೋಗ್ಯ ಕವಚ ಯೋಜನೆಯಡಿ ನೀಡಿರುವ ambulance ರಿಪೇರಿಯನ್ನು ಶೀಘ್ರವಾಗಿ ಮಾಡಿಸಿ ಆರೋಗ್ಯ ಸೇವೆಗೆ ಆಸ್ಪತ್ರೆಗೆ ಮರಳಿಸುವ ಬಗ್ಗೆ.

ಅಧ್ಯಕ್ಷರು:– ಜೆ.ಡಿ.ನಾಯಕ್.

ಶ್ರೀ ಜೆ.ಡಿ.ನಾಯಕ್ (ಭಟ್ಕಳ): ಸನ್ಮಾನ್ಯ ಅಧ್ಯಕ್ಷರೆ, ನನ್ನ ವಿಧಾನಸಭಾ ಕ್ಷೇತ್ರಕ್ಕೆ ಭಟ್ಕಳ ತಾಲ್ಲೂಕಿಗೆ ಆರೋಗ್ಯ ಕವಚ ಯೋಜನೆಯಡಿಯಲ್ಲಿ 108 Ambulance ಕೊಟ್ಟಿದ್ದಾರೆ. ಈ Ambulance ರಿಪೇರಿಗೆ ಹೋಗಿ 1 ತಿಂಗಳಾಗಿದೆ. 1 ತಿಂಗಳಾದರೂ ಕೂಡ ಇನ್ನೂ ರಿಪೇರಿಯಾಗಿ ಪುನ: ಸೇವೆಗೆ